ದಿನಾಂಕ 02.06.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ.ಕೆ.ಡಿ.ಆರ್ ವಕೀಲರಿಂದಃ

ದಾವಾ ಸ್ವತ್ತುಗಳ ಬಗ್ಗೆ ನನಗೆ ಗೊತ್ತು. ಸದರಿ ಸ್ವತ್ತುಗಳು ನನ್ನ ತಂದೆಗೆ ಸೇರಿದ ಸ್ವತ್ತುಗಳು. ನನ್ನ ತಂದೆಯವರು ಈಗ ಮರಣಹೊಂದಿರುತ್ತಾರೆ. ನಿಮ್ಮ ತಂದೆಯವರ ಜೀವಿತ ಕಾಲದಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಯನ್ನು ಬರೆದುಕೊಟ್ಟಿದ್ದಾರಾ ಎಂದರೆ ಇಲ್ಲ. 1 ನೇ ಪ್ರತಿವಾದಿ ನನ್ನ ತಾಯಿ. ವಾದಿ, ನಾನು ಮತ್ತು ಇತರೆ ಪ್ರತಿವಾದಿಯರು ಲಿಡ್ವಿನ್, ಗ್ರಾಸ್ವೆಲ್ ಪಿಂಟೋ ರವರ ವಾರಸುದಾರರು ಎಂದರೆ ಸರಿ. ಲಿಡ್ವಿನ್ ರವರಿಗೆ ಯಾವುದೇ ವಾರಸುದಾರರು ಇರುವುದಿಲ್ಲ. ನಾನು 1 ನೇ ಪ್ರತಿವಾದಿ, ವಾದಿ ಮತ್ತು ಇತರೆ ಪ್ರತಿವಾದಿಯರು ಗ್ರಾಸ್ವೆಲ್ ಪಿಂಟೋ ರವರ ವಾರಸುದಾರರು ಎಂದರೆ ಸರಿ. ನನ್ನ ತಂದೆಯವರ ಮರಣದ ನಂತರ ದಾವಾ ಸ್ವತ್ತಿನಲ್ಲಿ 1 ನೇ ಪ್ರತಿವಾದಿಗೆ 1/3 ನೇ ಭಾಗ, ನನಗೆ ವಾದಿಗೆ ಮತ್ತು ಇತರೆ ಪ್ರತಿವಾದಿಯರಿಗೆ ದಾವಾ ಸ್ವತ್ತಿನಲ್ಲಿ 2/24 ಭಾಗದ ಹಿಸ್ಸೆ ಬರಬೇಕು ಎಂದರೆ ಹೌದು. ನನ್ನ ತಂದೆಯವರ ಮರಣದ ನಂತರ ದಾವಾ ಸ್ವತ್ತುಗಳ ನಮ್ಮೆಲ್ಲರ ಸ್ವಾಧೀನದಲ್ಲಿತ್ತು ಎಂದರೆ ಸರಿ. ನಿಮ್ಮ ತಂದೆಯವರ ಮರಣದ ನಂತರ ದಾವಾ ಸ್ವತ್ತುಗಳನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ 1 ಮತ್ತು 8 ನೇ ಪ್ರತಿವಾದಿಯರು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ಈಗ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಯಾರು ಇದ್ದಾರೆ ಎಂದರೆ ಸಾಕ್ಷಿ ಈಗ 5 ನೇ ಪ್ರತಿವಾದಿಗೆ ಬಲವಂತವಾಗಿ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿದ್ದಾರೆ ಎಂದು ಹೇಳುತ್ತಾರೆ. ಆದರೆ ದಾಖಲಾತಿಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ಯಾವ ವರ್ಷದವರೆಗೆ 1 ಮತ್ತು 8 ನೇ ಪ್ರತಿವಾದಿಯರು ದಾವಾ ಸ್ವತ್ತನ್ನು ನೋಡಿಕೊಳ್ಳುತಿದ್ದರು ಎಂದರೆ ಸಾಕ್ಷಿ 2006 ರವರೆಗೂ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ.

2. ದಾವಾ ಸ್ವತ್ತಿನಲ್ಲಿ ಯಾವುದಾದರೂ ಮನೆ ಇದೆಯಾ ಎಂದರೆ ಸಾಕ್ಷಿ ಎರಡು ಮನೆಗಳು ಇದ್ದು, ಅದರಲ್ಲಿ ಒಂದು ಹಳೆ ಮನೆ, ಮತ್ತೊಂದು ಹೊಸಮನೆ ಎಂದು ಹೇಳುತ್ತಾರೆ. ಹಳೆಯ ಮನೆಯನ್ನು ಯಾರು ಕಟ್ಟಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆಯವರು ಕಟ್ಟಿದ್ದಾರೆ ಎಂದು ಹೇಳುತ್ತಾರೆ. ಹೊಸಮನೆಯನ್ನು ಯಾರು ಕಟ್ಟಿದ್ದಾರೆ ಎಂದರೆ ಸಾಕ್ಷಿ ಎಲ್ಲಾ ಅಣ್ಣತಮ್ಮಂದಿರು, ಅಕ್ಕಂದಿರು ತಂಗಿಯರು ಸೇರಿ ಹೊಸಮನೆಯನ್ನು ಕಟ್ಟಿದ್ದೇವೆ ಎಂದು ಹೇಳುತ್ತಾರೆ. ನನ್ನ ತಂದೆಯವರ ಮರಣದ ನಂತರ ಹೊಸಮನೆಯನ್ನು ಕಟ್ಟಿದ್ದೇವೆ. ಹೊಸಮನೆಯನ್ನು 8 ನೇ ಪ್ರತಿವಾದಿಯು ನಮ್ಮೆಲ್ಲರ ಪರವಾಗಿ

ಕಟ್ಟುವುದನ್ನು ನೋಡಿಕೊಳ್ಳುತ್ತಿದ್ದರು. ಹೊಸಮನೆಯನ್ನು ಕಟ್ಟಲು ನೀವು ಎಷ್ಟು ಹಣವನ್ನು ನೀಡಿದ್ದೀರಿ ಎಂದರೆ ಸಾಕ್ಷಿ 17 ರಿಂದ 20 ಲಕ್ಷ ರೂಪಾಯಿಗಳನ್ನು ಮನೆ ಕಟ್ಟಲು 8 ನೇ ಪ್ರತಿವಾದಿಗೆ ನೀಡಿದ್ದೇನೆ ಎಂದು ಹೇಳುತ್ತಾರೆ. ಅದನ್ನು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಆ ಸಮಯದಲ್ಲಿ ನಾನು ಹೊರದೇಶದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ದಾಖಲೆಗಳು ಈಗ ಇರುವುದಿಲ್ಲ. ಆದರೆ 8 ನೇ ಪ್ರತಿವಾದಿಯ ಹತ್ತಿರ ಇರುತ್ತವೆ, ಏಕೆಂದರೆ ಆ ಸಮಯದಲ್ಲಿ ಆತನೇ income tax ನ್ನು ಪಾವತಿ ಮಾಡುತ್ತಿದ್ದರು. ನಿಮ್ಮ ತಂದೆ ತಾಯಿಯರನ್ನು ನೀವು ಯಾವ ರೀತಿ ನೋಡುಕೊಳ್ಳುತ್ತಿದ್ದಿರಿ ಎಂದರೆ ಸಾಕ್ಷಿ 1990 ರಿಂದ ನಾನು ಹೊರದೇಶದಲ್ಲಿ ಕೆಲಸ ಮಾಡುತ್ತಿದ್ದು, ನಗದು ರೂಪದಲ್ಲಿ ತಿಂಗಳಿಗೆ 5 ಸಾವಿರದಂತೆ ಆರು ತಿಂಗಳಿಗೊಮ್ಮೆ ನಾನು ಮನೆಗೆ ಬಂದಾಗ ನನ್ನ ತಂದೆಯವರಿಗೆ ಹಣ ಕೊಡುತ್ತಿದ್ದೆ ಎಂದು ಹೇಳುತ್ತಾರೆ. ನನ್ನ ತಂದೆಯವರ ಮರಣದ ನಂತರ ನನ್ನ ಮತ್ತು ನನ್ನ ಹೆಂಡತಿಯ ಪರವಾಗಿ ನನ್ನ ತಾಯಿಯವರಿಗೆ ಎನ್.ಆರ್.ಐ ಚೆಕ್ ಮೂಲಕ ತಿಂಗಳಿಗೆ 5 ಸಾವಿರವನ್ನು ಕೊಡುತ್ತಿದ್ದೆ. ಅದಕ್ಕೆ ಸಂಬಂಧಪಟ್ಟ ಕೆಲವು ದಾಖಲೆಗಳು ನನ್ನ ಹತ್ತಿರ ಇರುತ್ತವೆ. ಸದರಿ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ, ನನ್ನ ಹತ್ತಿರ ಯಾವ ಯಾವ ದಾಖಲೆ ಇವೆ ಅವುಗಳನ್ನು ಹಾಜರುಪಡಿಸುತ್ತೇನೆ.

3. ನಿಮ್ಮ ತಂದೆಯವರ ಮರಣದ ನಂತರ ನಿಮ್ಮ ತಾಯಿಯವರನ್ನು ಹೋಗಿ ಭೇಟಿ ಮಾಡಿದ್ದೀರಾ ಎಂದರೆ ಸಾಕ್ಷಿ 2006 ರವರೆಗೆ ನಿರಂತರವಾಗಿ ಭೇಟಿ ಮಾಡುತ್ತಿದ್ದೆ. ಜನವರಿ 11, 2006 ರಲ್ಲಿ ಒಂದು ಮೀಟಿಂಗ್ ಆಗಿದ್ದು, 2006 ರಿಂದ 2017 ರವರೆಗೆ ಮೂರು ಬಾರಿ ನನ್ನ ತಾಯಿಯನ್ನು ಭೇಟಿ ಮಾಡಿದ್ದೇನೆ. ಯಾವ ಕಾರಣಕ್ಕೆ ನಿರಂತರವಾಗಿ ಭೇಟಿ ಮಾಡಿಲ್ಲ ಎಂದರೆ 2008 ರಲ್ಲಿ ನಾನು ನನ್ನ ಕುಟುಂಬದ ಸಮೇತ ತಾಯಿಯನ್ನು ಭೇಟಿ ಮಾಡಲು ಹೋದಾಗ 5 ನೇ ಪ್ರತಿವಾದಿ ನನ್ನ ತಾಯಿಯನ್ನು ಭೇಟಿ ಮಾಡಲು ಬಿಟ್ಟಿರುವುದಿಲ್ಲ ಅದಲ್ಲದೆ ಮನೆಯ ಒಳಗೆ ಹೋಗಲು ಬಿಟ್ಟಿರುವುದಿಲ್ಲ. ಅಲ್ಲದೆ ನನ್ನ ತಾಯಿ ನನ್ನ ಹೆಂಡತಿ ಹಾಗೂ ಮಗನ ಎದುರು ನನಗೆ ದೈಹಿಕವಾಗಿ ಹಲ್ಲೆ ಮಾಡಿರುತ್ತಾರೆ. ನಾವು ನೇರವಾಗಿ ವಿಮಾನ ನಿಲ್ದಾಣದಿಂದ ಲಗೇಜ್ ಸಮೇತ ಮನೆಗೆ ಬಂದಿದ್ದು , ನಮ್ಮ ಎಲ್ಲಾ ಲಗೇಜ್ ಗಳನ್ನು ಗೇಟಿನಿಂದ ಹೊರಗೆ ಹಾಕಿರುತ್ತಾರೆ. ಅಲ್ಲದೆ ನಾನು ಧರಿಸಿದ್ದ ಕನ್ನಡಕ, ಹಾಗೂ ನನ್ನ ಮೊಬೈಲ್ ಫೋನ್ ನ್ನು ಸಹ ನೆಲಕ್ಕೆ ತೆಗೆದು ಹಾಕಿರುತ್ತಾರೆ, ಅಲ್ಲದೆ ಅವಾಚ್ಯ ಶಬ್ದಗಳಿಂದ ನನ್ನನ್ನು ನಿಂಧಿಸಿರುತ್ತಾರೆ. ಹೆದರಿಕೆ ಕರೆಗಳನ್ನು ಮಾಡಿ ನನಗೆ ಮಾನಸಿಕವಾಗಿ

ಹಿಂಸೆ ನೀಡಿರುತ್ತಾರೆ. ಅದಾದ ನಂತರ 2 ಬಾರಿಗ ನಾನು ಭೇಟಿ ನೀಡಿದ್ದು, ಆ ಸಮಯದಲ್ಲೂ ಸಹ ಅದೇ ರೀತಿ ಮಾಡಿರುತ್ತಾರೆ.

4. ನಿಮ್ಮ ಪ್ರಮಾಣ ಪತ್ರದಲ್ಲಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ 5 ನೇ ಪ್ರತಿವಾದಿಯ ನೇತೃತ್ವದಲ್ಲಿ ರಾಜಿ ಮಾತುಕತೆಯಾಗಿದೆ ಎಂದು ತಿಳಿಸಿದ್ದು, ಎಲ್ಲಿ ಮತ್ತು ಯಾವಾಗ ಆಗಿದೆ ಎಂದರೆ ಸಾಕ್ಷಿ ನಮ್ಮ ಕುಟುಂಬದ ಕಾರ್ಯಕ್ರಮ ಮುಂಬೈಯಲ್ಲಿತ್ತು, ನಮ್ಮ ಕುಟುಂಬದವರನ್ನು ಮುಂಬೈಗೆ ಕರೆಸಿದ್ದು ಆ ಸಮಯದಲ್ಲಿ 6 ನೇ ಪ್ರತಿವಾದಿಯ ಮನೆಯಲ್ಲಿ ಇದ್ದೆವು. ದಿಃ 11.1.2006 ರಲ್ಲಿ ನನ್ನ wedding anniversary ಇದ್ದು ಆ ಸಮಯದಲ್ಲಿ ನನ್ನ ಎಲ್ಲಾ ಸಹೋದರಿ ಸಹೋದರರನ್ನು ಕರೆಸಿದ್ದು ಆ ಸಮಯದಲ್ಲಿ ನನ್ನ ತಾಯಿಯವರು ಇದ್ದರು. ಕಾರ್ಯಕ್ರಮವಾದ ನಂತರ 5 ನೇ ಪ್ರತಿವಾದಿ ನೇತೃತ್ವದಲ್ಲಿ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ತಾಯಿ ಹಾಗೂ ಎಲ್ಲಾ ಸಹೋದರ ಸಹೋದರಿಯರ ಸಮ್ಮುಖದಲ್ಲಿ ಮಾತುಕತೆಯಾಗಿತ್ತು. ಆ ಸಮಯದಲ್ಲಿ 5 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ವಯಸ್ಸಾಗಿದೆ ಅಲ್ಲದೆ ಅವರಿಗೆ ಪನ್ಷನ್ ಬರುತ್ತದೆ. ಅಲ್ಲದೆ 3 ನೇ ಸಹೋದರಿಯ ಪೆನ್ಷನ್ ಸಹ ತಾಯಿಗೆ ಬರುತ್ತದೆ, ಕೃಷಿ ಸ್ವತ್ತಿಗೆ ಸಂಬಂಧಪಟ್ಟಂತೆ ತಾಯಿಗೆ ತಿಂಗಳಿಗೆ ಸುಮಾರು 20 ಸಾವಿರ ಆಧಾಯ ಇದೆ ಎಂದು 1 ನೇ ಪ್ರತಿವಾದಿಯನ್ನು ಹಾಗೂ ದಾವಾ ಸ್ವತ್ತನ್ನು ನಾನೆ ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದರು. ನಂತರ ಎಲ್ಲಾ ಸ್ವತ್ತುಗಳನ್ನು 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಬೇಕು ಎಂದು ಹೇಳಿದ್ದರು. ತದನಂತರದಲ್ಲಿ ಸ್ವತ್ತಿನಲ್ಲಿ ಹಿಸ್ಸೆ ಇರುವ ಎಲ್ಲರೂ 1 ನೇ ಪ್ರತಿವಾದಿಯ ಹೆಸರಿಗೆ ಸ್ವತ್ತುಗಳನ್ನು ವರ್ಗಾವಣೆ ಮಾಡುವಂತೆ ಮಾತುಕತೆಯಾದ ಮೇರೆಗೆ ಒಪ್ಪಿರುತ್ತೇವೆ. ಅಲ್ಲದೆ ಹಿಸ್ಸೆ ಬೇಕಾದವರು ಆಗಲೇ ಕೇಳಬೇಕು ಎಂದು ಹೇಳಿದ್ದೆವು. ಆ ಸಮಯದಲ್ಲಿ ನಾನು ಮತ್ತು 6 ನೇ ಪ್ರತಿವಾದಿ ಮತ್ತು ವಾದಿ ದಾವಾ ಸ್ವತ್ತುಗಳಲ್ಲಿ ತಮಗೆ ಹಿಸ್ಸೆ ಬೇಕು ಎಂದು ಕೇಳಿದ್ದರು. ಆ ಸಮಯದಲ್ಲಿ ನನ್ನ ತಾಯಿಯ ಸಮಕ್ಷಮದಲ್ಲಿ ಎಲ್ಲರೂ ಸಹ ಹಿಸ್ಸೆ ಕೊಡುವುದಾಗಿ ಒಪ್ಪಿದರು. ವಾದಿಯು 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಸ್ವತ್ತುಗಳನ್ನು ವರ್ಗಾವಣೆ ಮಾಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಾದಿಗೆ ಹಿಸ್ಸೆಯನ್ನು ಕೊಡುವುದಾದರೆ ಸ್ವತ್ತುಗಳನ್ನು ವರ್ಗಾವಣೆ ಮಾಡಲು ಒಪ್ಪಿದ್ದರು ಎಂದು ಹೇಳುತ್ತಾರೆ. ವಾದಿಗೆ ಪಂಚಾಯತಿಯಲ್ಲಿ ನೀಡಿದ ಆಶ್ವಾಸನೆಯಂತೆ ದಾವಾ ಆಸ್ತಿಯಲ್ಲಿ ಹಿಸ್ಸೆ ನೀಡಿರುವುದಿಲ್ಲ ಎಂದರೆ ಸರಿ. ಅದರಂತೆ ದಿಃ 9.8.2011 ರಂದು ವಾದಿಯು 1 ನೇ ಪ್ರತಿವಾದಿಗೆ ಹಾಗೂ ಎಲ್ಲಾ ಸಹೋದರ ಸಹೋದರಿಯರಿಗೆ ಒಂದು ಕಾಗದವನ್ನು ಸಹ ಬರೆದಿದ್ದರು ಎಂದರೆ ಸಾಕ್ಷಿ ಉಳಿದವರ ಬಗ್ಗೆ ನನಗೆ ಗೊತ್ತಿಲ್ಲ, ನನಗೆ ಮಾತ್ರ ಕಳುಹಿಸಿದ್ದರು ಎಂದು ಹೇಳುತ್ತಾರೆ.

ಸದರಿ ದಾಖಲೆಯನ್ನು ಈಗಾಗಲೇ ನಿಪಿ15 ಎಂದು ಗುರುತಿಸಲಾಗಿದೆ. ನಾನು ಸದರಿ ಪತ್ರಕ್ಕೆ ನಿಪಿ19 ಉತ್ತರವನ್ನು ಸಹ ಬರೆದಿದ್ದೆ ಎಂದರೆ ಸರಿ.

5. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ 8 ನೇ ಪ್ರತಿವಾದಿಗೆ ಜಿ.ಪಿ.ಎ ನ್ನು ನೀಡಿದ್ದೀರಾ ಎಂದರೆ ಹೌದು. ಯಾವಾಗ ಎಂದರೆ ಸಾಕ್ಷಿ ದಿಃ 28.1.2006 ಮೀಟಿಂಗ್ ಆದ ನಂತರ ನೀಡಿದ್ದೇನೆ ಎಂದು ಹೇಳುತ್ತಾರೆ. ಆ ಜಿ.ಪಿ.ಎ ನ್ನು ಯಾರು ಕಳುಹಿಸಿಕೊಟ್ಟಿದ್ದಾರೆ ಎಂದರೆ ಸಾಕ್ಷಿ 5 ನೇ ಪ್ರತಿವಾದಿ ಎಂದು ಹೇಳುತ್ತಾರೆ. ಬೇರೆ ಯಾವುದಾದರೂ ದಾಖಲೆಯನ್ನು ಜಿ.ಪಿ.ಎ ಒಟ್ಟಿಗೆ ಕಳುಹಿಸಿಕೊಟ್ಟಿದ್ದಾರಾ ಎಂದರೆ ಸಾಕ್ಷಿ ನನ್ನ ಹಿಸ್ಸೆಗೆ ಸಂಬಂಧಪಟ್ಟಂತೆ ಅಫಿಡವಿಟ್ ನ್ನು ಸಹ ಕಳುಹಿಸಿಕೊಟ್ಟಿದ್ದರು ಎಂದು ಹೇಳುತ್ತಾರೆ. ಅದನ್ನು ಯಾಕೆ ಕಳುಹಿಸಿಕೊಟ್ಟಿದ್ದರು ಎಂದರೆ ಸಾಕ್ಷಿ ತಾವುಗಳು ಮೀಟಿಂಗ್ ನಲ್ಲಿ ನೀಡಿದ ಆಶ್ವಾಸನೆಯಂತೆ ಅಫಿಡವಿಟ್ ನ್ನು ಸಹ ಕಳುಹಿಸಿಕೊಡಬೇಕು ಎಂದು ಹೇಳಿದ್ದು ಅದರಂತೆ ಜಿ.ಪಿ.ಎ ಮತ್ತು ಅಫಿಡವಿಟ್ ನ್ನು ಕಳುಹಿಸಿಕೊಟ್ಟಿದ್ದರು ಎಂದು ಹೇಳುತ್ತಾರೆ. ಆ ದಾಖಲೆಯನ್ನು ಎಲ್ಲಿ ಅಟೆಸ್ಟ್ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಭಾರತೀಯ ದೂತವಾಸ, ಮಸ್ಕತ್ ನಲ್ಲಿ ಮಾಡಿಸಿದ್ದೇನೆ ಎಂದು ಹೇಳುತ್ತಾರೆ. ಯಾವ ಪ್ರಕ್ರಿಯೆಯಲ್ಲಿ ಅಟೆಸ್ಟ್ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಫಾರಂ ನ್ನು ತೆಗೆದುಕೊಂಡು, ಭರ್ತಿ ಮಾಡಿ ಆ ಫಾರಂ ನ ಜೊತೆ ಅಟೆಸ್ಟ್ ಗೆ ಸಂಬಂಧಪಟ್ಟ ದಾಖಲೆಗಳನ್ನು ಜೋಡಿಸಿ ನಂತರ ಒಂದು ದಾಖಲೆಗೆ ಒಂದು ಟೋಕನ್ ನ್ನು ನೀಡಿದ್ದು, ನಾನು ಎರಡು ಟೋಕನ್ ಗಳನ್ನು ತೆಗೆದುಕೊಂಡು ಎರಡು ದಾಖಲೆಗಳಿಗೆ 11.700 ಲಿಯಾನ್ ನ್ನು ಪಾವತಿ ಮಾಡಿ ಅಟೆಸ್ಟ್ ಮಾಡಿಸಿಕೊಂಡಿರುತ್ತೇನೆ. ನಂತರ ಸಂಜೆ ಸಮಯದಲ್ಲಿ ಕೌನ್ಸಿಲರ್ ಸಮಕ್ಷಮ ಹಾಜರಾಗಿ ಅಟೆಸ್ಟ್ ಆದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಟೋಕನ್‌ಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ಸಾಕ್ಷಿ ನಿಡಿ6 ಮತ್ತು 7 ನ್ನು ನೋಡಿ ಟೋಕನ್ ಗಳೆಂದು ಗುರುತಿಸಿದ್ದು, ನಿಡಿ4 ನ್ನು ನೋಡಿ 11.700 ಲಿಯಾನ್ ಹಣವನ್ನು ಪಾವತಿ ಮಾಡಿರುವುದಾಗಿ ಗುರುತಿಸಿರುತ್ತಾರೆ. ಅಟೆಸ್ಟ್ ಆದ ನಂತರ ಒರಿಜಿನಲ್ ಜಿ.ಪಿ.ಎ ಮತ್ತು ಅಫಿಡವಿಟ್ ನ್ನು ಏನು ಮಾಡಿದ್ದೀರಿ ಎಂದರೆ ಸಾಕ್ಷಿ 5 ನೇ ಪ್ರತಿವಾದಿಯ ಸೂಚನೆಯಂತೆ 8 ನೇ ಪ್ರತಿವಾದಿಗೆ ಆರ್.ಪಿ.ಎ.ಡಿ ಮೂಲಕ ಕಳುಹಿಸಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಆರ್.ಪಿ.ಎ.ಡಿ ಮೂಲಕ ಕಳುಹಿಸಿಕೊಟ್ಟ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಿಡಿ5 ನ್ನು ನೋಡಿ ಸದರಿ ದಾಖಲೆಗಳ ಮೂಲಕ ಕಳುಹಿಸಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನೀವು ಕಳುಹಿಸಿಕೊಟ್ಟ ದಾಖಲೆಯ ಜೆರಾಕ್ಸ್ ಪ್ರತಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಹೌದು. ಸದರಿ ಜಿ.ಪಿ.ಎ ಮತ್ತು ಅಫಿಡವಿಟ್ ನ ಪ್ರತಿಗಳು ನಿಮ್ಮ ಹತ್ತಿರ

ಇವೆಯಾ ಎಂದರೆ ಹೌದು. ಸದರಿ ಜೆರಾಕ್ಸ್ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ಸಾಕ್ಷಿಗೆ ದಿಃ 28.1.2006 ಜಿ.ಪಿ.ಎ ಹಾಗೂ ದಿಃ 28.1.2006 ರ ಅಫಿಡವಿಟ್ ನ್ನು ತೋರಿಸಿ ಅದೇ ದಾಖಲೆಯಾ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ.

6. ನಿಮ್ಮ ಎಲ್ಲಾ ಸಹೋದರ ಸಹೋದರಿಯರ ಆರ್ಥಿಕ ಸ್ಥಿತಿ ಹೇಗಿದೆ ಎಂದು ಹೇಳಬಹುದಾ ಎಂದರೆ ಸಾಕ್ಷಿ ನನ್ನ ಎಲ್ಲಾ 5 ಜನ ಸಹೋದರಿಯರು ಆರ್ಥಿಕವಾಗಿ ಚೆನ್ನಾಗಿದ್ದಾರೆ. 2 ನೇ ಪ್ರತಿವಾದಿ AIR INDIA ದಲ್ಲಿ ಕೆಲಸ ಮಾಡುತ್ತಿದ್ದರು, 3 ನೇ ಪ್ರತಿವಾದಿ INDIAN AIRLINES ಕೆಲಸ ಮಾಡುತ್ತಿದ್ದರು, ಮೃತ ಲಿವಿಂಗ್ ಪಿಂಟೋ ರವರು ಆಧಾಯ ತೆರಿಗೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ವಾದಿಯು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ತದನಂತರದಲ್ಲಿ INDIAN AIRLINES ನಲ್ಲಿ ಕೆಲಸಕ್ಕಾಗಿ ಸೇರಿರುತ್ತಾರೆ. 4 ನೇ ಪ್ರತಿವಾದಿ ಡೈಮೆಂಡ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ಮತ್ತು ನನ್ನ ಸಹೋದರರಿಗೆ 18 ವರ್ಷ ಆಗುವಾಗಲೇ ನನ್ನ ಸಹೋದರಿಯವರು ಒಳ್ಳೆಯ ಉದ್ಯೋಗದಲ್ಲಿ ಇದ್ದರು. ಆದಕಾರಣ ನಾವು ಅವರಿಗೆ ಯಾವುದೇ ರೀತಿಯಲ್ಲಿ ಆರ್ಥಿಕವಾಗಿ ಸಹಾಯ ಮಾಡಿರುವುದಿಲ್ಲ. ನನ್ನ ತಂದೆಯವರು ಮೊದಲಿಗೆ ಮಿಲಿಟ್ರಿಯಲ್ಲಿದ್ದರು, ತದನಂತರ ಅವರ ತಾಯಿಯನ್ನು ನೋಡಿಕೊಳ್ಳಲು ವಾಪಾಸು ಬಂದು ಬೆಳ್ತಂಗಡಿ PWD ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆಯ ಮರಣದ ನಂತರ ನನ್ನ ತಾಯಿಯವರು ನನ್ನ ತಂದೆಯವರ ಪೆನ್ಷನ್‌ನ್ನು ತೆಗೆದುಕೊಳ್ಳುತ್ತಿದ್ದರು. ನನ್ನ ಸಹೋದರಿ ಲಿಡ್ವಿನ್ ಕೆಲಸದಲ್ಲಿ ಇದ್ದಾಗಲೇ ಮರಣಹೊಂದಿದ ಕಾರಣ ಆಕೆಯ ಪೆನ್ಷನ್ ಸಹ ನನ್ನ ತಾಯಿಗೆ ಬರುತ್ತದೆ. ನೀವು ನಿಮ್ಮ ತಾಯಿಯನ್ನು ಭೇಟಿ ನೀಡಿದಾಗ ಆಕೆಯ ದೈಹಿಕ ಮತ್ತು ಮಾನಸಿದ ಸ್ಥಿತಿ ಹೇಗೆ ಇತ್ತು ಎಂದು ಹೇಳಬಹುದಾ ಎಂದರೆ ಜನವರಿ 2008 ರ ನಾನು ಭೇಟಿ ನೀಡಿದಾಗ ಆಕೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸರಿಯಾಗಿರಲಿಲ್ಲ. ರಾಜಿ ಮಾತುಕತೆಗೆ 2006 ರಲ್ಲಿ ಹೊರದೇಶದಿಂದ ಭಾರತಕ್ಕೆ ಬಂದಾಗ ನಿಮ್ಮ ಪಾಸ್ ಪೋರ್ಟಿನಲ್ಲಿ ಆಗಮನ ಮತ್ತು ನಿರ್ಗಮನದ ಬಗ್ಗೆ ಸೀಲ್ ಇದೆಯಾ ಎಂದರೆ ಹೌದು.

( ಈ ಹಂತದಲ್ಲಿ 1 ರಿಂದ 6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಪ್ರಧಾನ ಸಿವಿಲ್ ನ್ಯಾಯಾಧೀಶರು

(ಸಾ.ಓ.ಹೇ.ಕೇ.ಸ.ಇ.ಎ.ಒ) ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ